## ನಿವೇದನೆ

# ಲಿಂಗ ಅಸಮಾನತೆಗೆ ಕೊನೆಯೆಂದು?

**ಭಾರತದಲ್ಲಿ 30 ವರ್ಷ ವಯಸ್ಸಿಗಿಂತ ಕೆಳಗಿನ ಹೆಣ್ಣುಮಕ್ಕಳು ಪುರುಷರಿಗಿಂತ ಶೇ. 23.07ರಷ್ಟು ಕಡಿಮೆ ಹಾಗೂ 30–40 ವರ್ಷ ವಯಸ್ಸಿನ ಮಹಿಳೆಯರು ಶೇ. 30.24ರಷ್ಟು ಕಡಿಮೆ ವೇತನ ಪಡೆಯುತ್ತಾರಂತೆ. ಬಹುತೇಕ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಹೆಣ್ಣುಮಕ್ಕಳಿಗಿರುವ ಸಾಮಾಜಿಕ ಭದ್ರತೆಯ ಕೊರತೆಯೂ ಆರ್ಥಿಕ ಸ್ವಾತಂತ್ರ್ಯ ನೀಡುವ ಉದ್ಯೋಗಕ್ಕೆ ಬೆನ್ನು ತಿರುಗಿಸುವಂತೆ ಮಾಡಿದೆ.**



ಈಶ್ವರ್

ಔದ್ಯೋಗಿಕ ಕ್ಷೇತ್ರದಲ್ಲಿ ಲಿಂಗ ಅಸಮಾನತೆ ಹೆಚ್ಚುತ್ತಿದೆ ಎಂಬ ಕೂಗು ಸಾಕಷ್ಟು ವರ್ಷಗಳಿಂದ ಕೇಳಿ ಬರುತ್ತಲೇ ಇದೆ. ಇತ್ತೀಚೆಗೆ ವಿಶ್ವಸಂಸ್ಥೆಯ ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆ (ಐಎಲ್‌ಒ) ಹೊರತಂದಿರುವ 'ಜಾಗತಿಕ ಔದ್ಯೋಗಿಕ ಹಾಗೂ ಸಾಮಾಜಿಕ ದೃಷ್ಟಿಕೋನದಲ್ಲಿ ಮಹಿಳೆ: 2017' ಎಂಬ ವರದಿಯ ಪ್ರಕಾರ ಪ್ರಸಕ್ತ ವರ್ಷ ಜಾಗತಿಕ ಕಾರ್ಮಿಕ ಕ್ಷೇತ್ರದಲ್ಲಿ ಮಹಿಳೆಯ ಪಾಲ್ಗೊಳ್ಳುವಿಕೆ ಶೇ.49ರಷ್ಟು ಮಾತ್ರ. ಅಂದರೆ ಪುರುಷರಿಗಿಂತ ಶೇ 27ರಷ್ಟು ಕಡಿಮೆಯಾಗಿದೆ. ಈ ವರದಿಯ ಪ್ರಕಾರ ದಕ್ಷಿಣ ಏಷ್ಯಾದ ರಾಷ್ಟ್ರಗಳಲ್ಲಿ ಈ ಅಸಮತೆ ಇನ್ನಷ್ಟು ಹೆಚ್ಚಿದೆ. ಲಿಂಗ ತಾರತಮ್ಯ ಕಡಿಮೆ ಮಾಡುವ ನಿಟ್ಟಿನಲ್ಲಿ ಸಂಘಟಿತ ಹೋರಾಟಗಳು ನಡೆಯುತ್ತಿರುವ ಈ ಸಂದರ್ಭದಲ್ಲಿ ಜಾಗತಿಕವಾಗಿ ಅರ್ಧದಷ್ಟು ಮಹಿಳೆಯರು ಕಾರ್ಮಿಕ ಶಕ್ತಿಯಾಗಿ ಹೊರಹೊಮ್ಮಲು ಸಾಧ್ಯವಾಗುತ್ತಿಲ್ಲ ಎಂದರೆ, ಔದ್ಯೋಗಿಕ ವಲಯದಲ್ಲಿ ಮಹಿಳೆಯ ಸ್ಥಿತಿ–ಗತಿಯ ಬಗ್ಗೆ ಗಂಭೀರವಾಗಿ ಚಿಂತಿಸಬೇಕಾದ ತುರ್ತು ಅಗತ್ಯವಿದೆ.

ಜಾಗತಿಕವಾಗಿ ನಿರುದ್ಯೋಗಿಗಳ ಪ್ರಮಾಣವನ್ನು ತೆಗೆದುಕೊಂಡರೆ ಮಹಿಳೆಯರಲ್ಲಿ ಶೇ. 6.2ರಷ್ಟಿದ್ದರೆ, ಪುರುಷರಲ್ಲಿ ಈ ಪ್ರಮಾಣ ಶೇ. 5.5. ಒಟ್ಟು ಜನಸಂಖ್ಯೆಯ ಸುಮಾರು ಅರ್ಧದಷ್ಟು ಹೆಣ್ಣುಮಕ್ಕಳಿರುವ ಭಾರತದಲ್ಲಂತೂ ಈ ಅಸಮಾನತೆಯ ಪ್ರಮಾಣ ಸಾಕಷ್ಟು ಜಾಸ್ತಿಯಿದೆ ಎನ್ನುತ್ತದೆ ವರದಿ. ಗ್ರಾಮೀಣ ಪ್ರದೇಶದಲ್ಲಿ ದುಡಿಮೆಗೆ ತೊಡಗುವ ಮಹಿಳೆಯರ ಸಂಖ್ಯೆ ಕಳೆದ ದಶಕದಲ್ಲಿ ಗಣನೀಯವಾಗಿ ಇಳಿದಿದೆ. ಅವರಲ್ಲಿ ಉದ್ಯೋಗ ನಿರ್ವಹಿಸುವ ಇಚ್ಛಾಶಕ್ತಿಯಿದ್ದರೂ ಲಿಂಗ ತಾರತಮ್ಯದಿಂದಲೇ ಅನುಕೂಲಕರ ಕೆಲಸ ಕಂಡುಕೊಳ್ಳಲು ಕಷ್ಟಕರವಾಗಿರುವುದು ಇದಕ್ಕೆ ಕಾರಣ.

ಮಹಿಳೆಯರು ಆರ್ಥಿಕವಾಗಿ ಸಬಲರಾಗಲು, ಆ ಮೂಲಕ ಇತರ ಕ್ಷೇತ್ರಗಳಲ್ಲಿ ಮುಂಚೂಣಿಯಲ್ಲಿ ನಿಲ್ಲುವಂತಾಗಲು ದುಡಿಮೆ ಅತ್ಯವಶ್ಯಕ. ಆದರೆ ದುಡಿಯುವ ಕೈಗಳು ಖಾಲಿ ಇವೆ. ಈ ಅಸಮತೆಯಿಂದ ಜಾಗತಿಕ ಆರ್ಥಿಕತೆಗೂ ತೀವ್ರ ಹೊಡೆತ ಬಿದ್ದಿದೆ ಎಂಬುದು ಆತಂಕಕಾರಿ ವಿಷಯ. ದುಡಿಯುವ ಅವಕಾಶದಲ್ಲಿ ತಲೆದೋರಿರುವ ಈ ಅಸಮಾನತೆಯನ್ನು ಶೇ. 25ಕ್ಕೆ ಇಳಿಸಿದರೂ ಸಾಕು, ಜಾಗತಿಕ ಆರ್ಥಿಕತೆ 5.8 ಟ್ರಿಲಿಯನ್ ಡಾಲರ್‌ನಷ್ಟು ಹೆಚ್ಚಾಗುತ್ತದೆ ಎಂದಿರುವ ವಿಶ್ವಸಂಸ್ಥೆಯ ಈ ವರದಿ, ಭಾರತದ ಆರ್ಥಿಕತೆಯೂ ಒಂದು ಟ್ರಿಲಿಯನ್ ಡಾಲರ್‌ನಷ್ಟು ಸುಧಾರಿಸಲಿದೆ ಎಂದಿದೆ.

ಶಿಕ್ಷಣ ಕ್ಷೇತ್ರದಲ್ಲಿ ಓದಲು ಅವಕಾಶ ಸಿಕ್ಕ ಹೆಣ್ಣುಮಕ್ಕಳು ಪುರುಷರನ್ನು ಮೀರಿಸುತ್ತಿದ್ದಾರೆ. ಆದರೆ ಈ ಯಶಸ್ಸಿನ ಓಟವನ್ನು ಔದ್ಯೋಗಿಕ ವಲಯದಲ್ಲಿ ಮುಂದುವರಿಸಲು ಯಾಕೆ ಹಿಂಜರಿಯುತ್ತಿದ್ದಾರೆ? ಈ ಕುರಿತ ಕಾರಣಗಳನ್ನು ಹುಡುಕುತ್ತ ಹೊರಟರೆ ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣಿಗಿರುವ ಅಡೆತಡೆಗಳು ಗೋಚರಿಸುತ್ತವೆ. ಇದರಲ್ಲಿ ಪ್ರಮುಖವಾದುದು ವೇತನದಲ್ಲಿರುವ ತಾರತಮ್ಯ. ವಿಶ್ವ ಬ್ಯಾಂಕ್ ವರದಿಯ ಪ್ರಕಾರ ಭಾರತದಲ್ಲಿ 30 ವರ್ಷ ವಯಸ್ಸಿಗಿಂತ ಕೆಳಗಿನ ಹೆಣ್ಣುಮಕ್ಕಳು ಪುರುಷರಿಗಿಂತ ಶೇ. 23.07ರಷ್ಟು ಕಡಿಮೆ ಹಾಗೂ 30–40 ವರ್ಷ ವಯಸ್ಸಿನ ಮಹಿಳೆಯರು ಗಂಡಸರಿಗಿಂತ ಶೇ. 30.24ರಷ್ಟು ಕಡಿಮೆ ವೇತನ ಪಡೆಯುತ್ತಾರಂತೆ. ಗ್ರಾಮೀಣ ಪ್ರದೇಶದಲ್ಲಿ ಮಹಿಳಾ ಕಾರ್ಮಿಕರು ದಿನವೊಂದಕ್ಕೆ ಸರಾಸರಿ 428.66 ರೂಪಾಯಿ ಗಳಿಸಿದರೆ, ಪುರುಷರು ಇದೇ ಕೆಲಸಕ್ಕೆ 550.23 ರೂಪಾಯಿ ಸಂಬಳ ಪಡೆಯುತ್ತಾರಂತೆ.

ಬಹುತೇಕ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಹೆಣ್ಣುಮಕ್ಕಳಿಗಿರುವ ಸಾಮಾಜಿಕ ಭದ್ರತೆಯ ಕೊರತೆಯೂ ಆರ್ಥಿಕ ಸ್ವಾತಂತ್ರ್ಯ ನೀಡುವಂತಹ ಉದ್ಯೋಗಕ್ಕೆ ಬೆನ್ನು ತಿರುಗಿಸುವಂತೆ ಮಾಡಿದೆ. ಉದ್ಯೋಗ ಮಾಡುವ ಸ್ಥಳದಲ್ಲಿ, ಆ ಸ್ಥಳಕ್ಕೆ ತೆರಳುವಂತಹ ಸಂದರ್ಭದಲ್ಲಿ ಅನುಭವಿಸುವ ಲೈಂಗಿಕ ಕಿರುಕುಳ, ಹಿಂಸೆ ಪ್ರಮುಖ ಅಡೆತಡೆಯೆನ್ನಬಹುದು. ಕೆಲವು ಕಡೆ ಹೆರಿಗೆ ರಜೆಯ ಸೌಲಭ್ಯದಿಂದಲೂ ಮಹಿಳಾ ಉದ್ಯೋಗಿಗಳು ವಂಚಿತರಾಗಿದ್ದಾರೆ. ಉದ್ಯೋಗದ ಸ್ಥಳದಲ್ಲಿ ಮಕ್ಕಳ ಪಾಲನಾ ಕೇಂದ್ರಗಳ ಸೌಲಭ್ಯದ ಕೊರತೆ, ಸಾರಿಗೆ ಸವಲತ್ತಿನ ಸಮಸ್ಯೆ, ಅನುಕೂಲಕರ ಕೆಲಸದ ಅವಧಿಯಿಲ್ಲದಿರುವುದರಿಂದ ಹೆಣ್ಣುಮಕ್ಕಳು ಉದ್ಯೋಗ ಸೇರಲು ಹಿಂದೇಟು ಹಾಕುತ್ತಿದ್ದಾರೆ. ಇನ್ನೊಂದು ಪ್ರಮುಖ ಅಂಶವೆಂದರೆ ಉದ್ಯೋಗ ಮತ್ತು ಕುಟುಂಬದ ಹೊಣೆಯ ಮಧ್ಯೆ ಸಮತೋಲನ ಕಾಯ್ದುಕೊಳ್ಳಲಾಗದೆ ಹೆಚ್ಚಿನ ಮಹಿಳೆಯರು ಕುಟುಂಬವನ್ನೇ ಆಯ್ಕೆ ಮಾಡಿಕೊಳ್ಳುವ ಸಾಧ್ಯತೆ ಅಧಿಕ. ವೇತನ ತಾರತಮ್ಯ, ಕಿರುಕುಳ ಮೊದಲಾದ ಸಮಸ್ಯೆಗಳನ್ನು ಕ್ರಮೇಣ ಪರಿಹರಿಸಿದರೆ ಹೆಚ್ಚು ಮಂದಿ ಮಹಿಳೆಯರು ಉದ್ಯೋಗ ಮಾಡಲು ಮುಂದೆ ಬರಬಹುದು, ಆ ಮೂಲಕ ಆರ್ಥಿಕತೆಗೆ ತಮ್ಮ ಕೊಡುಗೆ ನೀಡಬಹುದು.

ಶಿಕ್ಷಣ, ಆರೋಗ್ಯ ಹಾಗೂ ಸಾಮಾಜಿಕ ಸೇವೆಯ ಕ್ಷೇತ್ರಗಳಲ್ಲಿ ಉದ್ಯೋಗ ಹುಡುಕಿಕೊಳ್ಳಲು ಒಲವು ತೋರಿಸುತ್ತಿರುವ ಮಹಿಳೆಯರು, ಏಷ್ಯಾದಲ್ಲಿ ಉತ್ಪಾದನಾ ವಲಯದಲ್ಲಿ ಅದರಲ್ಲೂ ಸಿದ್ಧ ಉಡುಪು ತಯಾರಿಕಾ ಘಟಕಗಳಲ್ಲಿ ಕೆಲಸ ಮಾಡಲು ಹೆಚ್ಚಾಗಿ ಮುಂದೆ ಬರುತ್ತಿದ್ದಾರೆ. ಉಳಿದ ಕ್ಷೇತ್ರಗಳಲ್ಲೂ ಮಹಿಳೆಯರು ಆಸಕ್ತಿ ವಹಿಸುವಂತೆ ಮಾಡಲು ಕಾರ್ಮಿಕ ಸಂಘಟನೆಗಳು ಪ್ರಮುಖ ಪಾತ್ರ ವಹಿಸಬೇಕಾಗಿದೆ. ಸಮಾನತೆಗೆ ಹೋರಾಡಲು ನಾಯಕತ್ವ ಗುಣ ಬೆಳೆಸುವ, ಉದ್ಯೋಗ ಕ್ಷೇತ್ರದಲ್ಲಿ ತಮ್ಮ ಹಕ್ಕುಗಳನ್ನು ಅರಿತುಕೊಂಡು ಚಲಾಯಿಸುವಂತೆ ಅವರಲ್ಲಿ ಆತ್ಮವಿಶ್ವಾಸ ತುಂಬುವ ಕೆಲಸವೂ ತುರ್ತಾಗಿ ಆಗಬೇಕಾಗಿದೆ.

■ **ಸುಧಾ ಹೆಗಡೆ**